ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

# ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 1159/2023 .

ಫ್ರಾ.ಸಾ. : 3
ಚಾ.ಸಾ. : 3

ಹೆಸರು ಃ ಸತೀಶ
ತಂದೆಯ ಹೆಸರು ಃ ರಾಮು
ವಯಸ್ಸು ಃ 42 ವರ್ಷ
ಉದ್ಯೋಗ ಃ ಕೂಲಿ
ವಿಳಾಸ ಃ ಬೆಸಗೂರು ಗ್ರಾಮ

... ........................................................................................ ...

ದಿನಾಂಕ 7 ನೇ ಜೂನ್ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ ಃ -

ಚಾಸಾ 1 ನನ್ನ ಅಣ್ಣನ ಮಗಳು. ಚಾಸಾ 2 ನನ್ನ ಅತ್ತಿಗೆ. ಆರೋಪಿ ನನ್ನ ಅಳಿಯ. ಸುಮಾರು 8 ವರ್ಷಗಳ ಹಿಂದೆ ಆರೋಪಿ ನನ್ನ ಅತ್ತಿಗೆಯನ್ನು ಕತ್ತಿಯಿಂದ ಕಡೆದಿರುತ್ತಾನೆ. ನಾನು ಆಗ ಮನೆಯಲ್ಲಿದ್ದೆ. ಚಾಸಾ 2 ರವರ ಮನೆ ಹಾಗೂ ನಮ್ಮ ಮನೆ ಅಕ್ಕಪಕ್ಕದಲ್ಲಿದೆ. ಶಬ್ದ ಕೇಳಿ ನಾನು ಚಾಸಾ 2 ರವರ ಮನೆಯ ಬಳಿ ಹೋದೆ. ಅಷ್ಟರಲ್ಲಿ ಆರೋಪಿ ಕತ್ತಿಯಿಂದ ಕಡಿದು ಅಲ್ಲಿಂದ ಹೋಗಿದ್ದನು. ಆ ನಂತರ ಚಾಸಾ 1 ಮತ್ತು 2 ರವರನ್ನು ಗೋಣಿಕೊಪ್ಪ ಆಸ್ಪತ್ರೆ ಹಾಗೂ ಮಡಿಕೇರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ.

(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ ಹಾಗೂ ಸ.ಸ.ಅ.ರವರ ವಾದವನ್ನು ಆಲಿಸಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

ಪಾಟೀ ಸವಾಲು: - ಮಾನ್ಯ ಸ.ಸ ಅ ರವರಿಂದ : -

ನಾನು ಶಬ್ದ ಕೇಳಿ ಚಾಸಾ 2 ರವರ ಮನೆಯ ಬಳಿ ಹೋದಾಗ ಚಾಸಾ 1 ಮತ್ತು 2 ರವರನ್ನು ಕುರಿತು ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದರು. ಚಾಸಾ 1 ಗಲಾಟೆ ಬಿಡಿಸಲು ಹೋದಾಗ ಅವರ ತಲೆಗೆ ಕತ್ತಿಯಿಂದ ಹಲ್ಲೆ ಮಾಡಿದರು ಎಂದರೆ ಸರಿ. ನಾನು ಆಗ ಜಗಳ ಬಿಡಿಸಿ ಸಮಾಧಾನಪಡಿಸಿದೆನು ಎಂದರೆ ಸರಿ. ಆರೋಪಿ ಕತ್ತಿಯನ್ನು ಅಲ್ಲೇ ಬಿಸಾಡಿ ನಿಮ್ಮನ್ನು ಬಿಡುವುದಿಲ್ಲ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿ ಹೋದರು ಎಂದರೆ ಸರಿ. ಆನಂತರ ಚಾಸಾ 1 ದೂರು ನೀಡಿದರು ಎಂದರೆ ಸರಿ.

ಪಾಟೀ ಸವಾಲು :- ಆರೋಪಿ ಪರ ವಕೀಲರವರಿಂದ :-

ನನ್ನ ಹಾಗೂ ಚಾಸಾ 1 ರವರ ಮನೆ ಒಂದೇ ಬೇಲಿಯಲ್ಲಿದೆ. ಆರೋಪಿ ಚಾಸಾ 1 ರವರ ಮನೆಯಲ್ಲಿ ವಾಸವಿದ್ದರು. ಆರೋಪಿ ಮತ್ತು ಚಾಸಾ 2 ರವರ ನಡುವೆ ಆಗಾಗ ಗಲಾಗೆ ಆಗುತ್ತಿತ್ತು ಎಂದರೆ ಸರಿ. ಅವರು ಗಲಾಟೆ ಮಾಡಿಕೊಳ್ಳುವಾಗ ನಮಗೆ ಶಬ್ದ ಕೇಳುತ್ತಿತ್ತು. ಆದಿನ ಮ. 3.30 ಗಂಟೆಗೆ ಕೆಲಸದಿಂದ ವಾಪಸ್ ಆಗಿರುತ್ತೇನೆ. 3.30 ಕ್ಕೆ ನಾನು ಚಾಸಾ 1 ರವರ ಮನೆ ಬಳಿ ಹೋದೆ, ಆಗ ಗಲಾಟೆ ಮುಗಿದಿತ್ತು ಆಗ ಆರೋಪಿ ಅಲ್ಲಿ ಇರಲಿಲ್ಲ. ನಾನು ಚಾಸಾ 1 ಮತ್ತು 2 ರವರನ್ನು ಆಸ್ಪತ್ರೆಗೆ ಕರದುಕೊಂಡು ಹೋದೆ. ಗಲಾಟೆ ಯಾವ ವಿಚಾರಕ್ಕೆ ಆಯಿತು ಎಂದು ನನಗೆ ಗೊತ್ತಿಲ್ಲ. ಘಟನೆ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರು ಹೇಳಿದ ಮೇರೆಗೆ ನಾನು ಹೇಳುತ್ತಿದ್ದೇನೆ ಎಂದರೆ ಸರಿ.

ಮರುವಿಚಾರಣೆ :- - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)